ಮಹಾನಿರ್ದೇಶನಾಲಯದ ಒಬ್ಬ ಹಿರಿಯ ಅಧಿಕಾರಿ—ಈ ಮೂವರನ್ನು ಒಳಗೊಂಡ ಸಮಿತಿಯನ್ನು ನಿಯಮಿಸಿತು ಮಹಾನಿರ್ದೇಶನಾಲಯ. ಮೂವರು ಸದಸ್ಯರನ್ನೊಳಗೊಂಡ ಉನ್ನತ ಮಟ್ಟದ ಸಮಿತಿಯು ಎರಡು ದಿನ ಕುಳಿತು ಆ ಇಡೀ ಕೇಸಿನ ಬಗ್ಗೆ ಸಮಗ್ರವಾಗಿ ಚರ್ಚಿಸುವುದೆಂದು ನಿರ್ಣಯಿಸಿದಂತೆ ಸಭೆ ನಡೆಯಿತು ಕೂಡ. ಆಡಿಟ್ ವಿಭಾಗದವರು ಕೊಟ್ಟ ಸಂಪೂರ್ಣ ವರದಿಯನ್ನು ಮೊದಲ ದಿನ ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ ಸಮಿತಿಯ ಮೂವರೂ ಸದಸ್ಯರು, ನಾಳೆ ಅಂತಿಮ ನಿರ್ಧಾರವನ್ನು ಕೈಕೊಳ್ಳುವುದಾಗಿ ನಿರ್ಧರಿಸಿ, ಅಂದಿನ ಸಭೆಯನ್ನು ಬರಕಾಸ್ತು ಮಾಡಿದ್ದರು.

ಮಾರನೆಯ ದಿನದ ಸಭೆ ಆರಂಭವಾಗುತ್ತಿದ್ದಂತೆ, ಕಾನೂನು ವಿಭಾಗದಿಂದ ಬಂದ ಸದಸ್ಯರು ಗಹಗಹಿಸಿ ನಗುತ್ತ, 'ಸದ್ಯ ಈ ಕೇಸನ್ನು ನೀವು ಸುಪ್ರಿಂ ಕೋರ್ಟಿಗೆ ವಹಿಸಿಲ್ಲವಲ್ಲ, ಅದಕ್ಕಾಗಿ ನಿಮ್ಮನ್ನು ಅಭಿನಂದಿಸಬೇಕು. ಕಾನೂನೆಂಬುದು ಕೇವಲ ಶಿಕ್ಷಿಸಲು ಇರುವುದಿಲ್ಲ; ಬದಲಾಗಿ ವ್ಯವಸ್ಥೆಯನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಲು ಅದು ಮಾರ್ಗದರ್ಶನ ಮಾಡುತ್ತದೆ. ಡಾ. ಚಟರ್ಜಿ ಅವರು ಮಾಡಿದ್ದು ಯಾವುದೇ ಬಗೆಯ ಅಪರಾಧವಲ್ಲ. ಇಲ್ಲಿ ನಾನು ಇದಕ್ಕೂ ಹೆಚ್ಚಿನ ಏನನ್ನೂ ಹೇಳುವುದು ಅಗತ್ಯವಿಲ್ಲ' ಎಂದು ಒಮ್ಮೆಲೇ ಮೌನವಾಗಿಬಿಟ್ಟರು. ಅಕೌಂಟಂಟ್ ಜನರಲ್ ಆಫೀಸಿನಿಂದ ಬಂದ ಹಿರಿಯ ಅಧಿಕಾರಿಯು ಇನ್ನೂ ಸ್ವಲ್ಪ ಮುಂದೆ ಹೋಗಿ, 'ಎರಡೂವರೆ ಆಣೆಯ ಖರ್ಚಿನ ಹಿಂದಿನ ವಾಸ್ತವ ಸತ್ಯವನ್ನರಿಯದೆ, ಕೇಂದ್ರ ನಿರ್ದೇಶಕರು ಕೊಟ್ಟ ವಿವರಣೆಯನ್ನು ನಿಮ್ಮ ಸಂಸ್ಥೆಯ ಕೆಲಸದ ಹಿನ್ನೆಲೆಯಲ್ಲಿ ಸೂಕ್ಷ್ಮವಾಗಿ ಪರಾಮರ್ಶಿಸದೆ, ಈ ಸಮಿತಿಯನ್ನು ಅನಗತ್ಯವಾಗಿ ರಚಿಸಿ, ಇದಕ್ಕಾಗಿ ಹತ್ತು ಸಾವಿರ ರೂಪಾಯಿಗಳಿಗೂ ಹೆಚ್ಚು ಹಣವನ್ನು ವ್ಯರ್ಥವಾಗಿ ಖರ್ಚು ಮಾಡಿದ್ದು ನಿಜವಾಗಿಯೂ ನೀವು ಮಾಡಿದ ದೊಡ್ಡ ಅಪರಾಧ. ಇಂಥ ಸಂದರ್ಭಗಳಲ್ಲಿ ಮೇಲಿನವರು ತಮ್ಮ ವಿವೇಚನಾ ಸಾಮರ್ಥ್ಯವನ್ನು ಬಳಸಿಕೊಳ್ಳಬೇಕೇ ವಿನಃ ಕೇವಲ ಕೆಳಗಿನ ಅಧಿಕಾರಿಗಳನ್ನು ಅಪರಾಧಿಯ ಸ್ಥಾನದಲ್ಲಿ ನಿಲ್ಲಿಸಿ, ಶಿಕ್ಷಿಸಿ ಸಂತೋಷಪಡುವುದಲ್ಲ. ಇಂಥ ವಿಷಯಗಳಲ್ಲಿ ಒಂದು ಸಮಿತಿ ಸ್ಥಾಪಿತವಾಗಿ, ಅದು ನಿರ್ಣಯಿಸಿದ ಪ್ರಕಾರ 'ಇಂತಿಂಥ ಕ್ರಮವನ್ನು ಕೈಗೊಳ್ಳಲಾಗಿದೆ' ಎಂದು ನೀವು ಆ ನಿರ್ದೇಶಕರಿಗೆ ಪತ್ರ ಬರೆದರೆ ಅದು ಈ ಇಡೀ ಸಮಿತಿಗೇ ಅಪಮಾನ ಮಾಡಿದಂತೆ. ಹೆಚ್ಚು ಹೇಳುವುದೇನು? ನಿಮ್ಮ ಮಹಾನಿರ್ದೇಶನಾಲಯಕ್ಕೆ ದತ್ತವಾದ ವಿವೇಚನೆಯನ್ನು ಬಳಸಿ ಆ ನಿರ್ದೇಶಕರಿಗೆ ನೀವೇ ಸೂಕ್ತ ಉತ್ತರ ಬರೆಯಿರಿ.' ಎಂದು ಹೇಳಿ ಎದ್ದು ಹೊರಟರು ಆ ಅಧಿಕಾರಿ. ಒಂದೆರಡು ಹೆಜ್ಜೆ ಹೋಗಿ ಮತ್ತೆ ಹೊರಳಿ ನಿಂತ ಅವರು, 'ಒಬ್ಬ ಸಮರ್ಥ ಅಧಿಕಾರಿಯ ಕಾರ್ಯವೈಖರಿಯನ್ನು ಮೆಚ್ಚುವ ಬದಲು, ಅವರಿಗೆ ಹೀಗೆ ಕಿರಿಕಿರಿ ಕೊಟ್ಟದ್ದು ನಿಮ್ಮ ಮೊದಲನೆಯ ತಪ್ಪು. ಅದಕ್ಕಾಗಿ ಇಷ್ಟೊಂದು ಹಣವನ್ನು ವ್ಯಯಿಸಿದ್ದು ಇನ್ನೂ ಘೋರ ಅಪರಾಧ. ಈ ಹಿನ್ನೆಲೆಯಲ್ಲಿ ಇದಕ್ಕೆ ಕಾರಣರಾದ ಮೇಲಧಿಕಾರಿಗೆ ಮೆಮೋ ಕೊಟ್ಟು, ಅವರ ಇಂಥ ನಡತೆಯನ್ನು ಬದಲಿಸಿಕೊಳ್ಳಲು ಮೊದಲು ಸೂಚಿಸಿರಿ, ಹಾಗೂ ಈ ಇಡೀ ಪ್ರಕ್ರಿಯೆಗೆ ಮಾಡಿದ ಖರ್ಚನ್ನು ಅವರೇ ತುಂಬಿಕೊಡಬೇಕೆಂದು ಆದೇಶಿಸಿರಿ' ಎಂದು ಖಡಕ್ಕಾಗಿ ಸೂಚಿಸಿ ಅಲ್ಲಿಂದ ಹೊರನಡೆದುಬಿಟ್ಟರು. ಕಾನೂನು ವಿಭಾಗದ ಅಧಿಕಾರಿಯೂ ಸಹ ಅವರ ಹಿಂದೆಯೇ ರಭಸದಿಂದ ಹೊರಟು ಬಿಟ್ಟರು. ಈ ಇಬ್ಬರೂ ಹೊರಗಿನ ಸದಸ್ಯರ ಮಾತು

